ಉಳಿದ ಭಾಗಗಳಲ್ಲಿ ಗುಂಡಿ ಮುಚ್ಚುವ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾಮಗಾರಿಗಳನ್ನು ಪೂರ್ಣಗೊಳಿಸಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು.

ಪಟ್ಟಣ ಪಂಚಾಯ್ತಿ ಕಾಂಪ್ಲೆಕ್ಸ್ ಕಾಮಗಾರಿ

293(233) ಶ್ರೀ ಎಂ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತುರುವೇಕೆರೆ ಪಟ್ಟಣ ಪಂಚಾಯ್ತಿಯ ಕಾಂಪ್ಲೆಕ್ಸ್ ಮಂಜೂರಾತಿಯಾಗಿ ಸುಮಾರು ಒಂದೂವರೆ ವರ್ಷಗಳು ಕಳೆದರೂ–ಕಾಮಗಾರಿ ಪ್ರಾರಂಭಿಸದೇ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಾಲಚಂದ್ರ ಲಕ್ಷ್ಮಣರಾವ್ ಜಾರಕಿಹೊಳಿ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು)

(ಅ) ಗುತ್ತಿಗೆದಾರರಿಗೆ ಕಾಮಗಾರಿ ಪ್ರಾರಂಭಿಸಲು ಕಾರ್ಯದೇಶವನ್ನು ನೀಡಿದ್ದು, ಸದರಿ ಕಾಮಗಾರಿಯು ಪ್ರಗತಿಯಲ್ಲಿದೆ.

(ಆ) ದಿನಾಂಕ 09.12.2010ರಂದು ಗುತ್ತಿಗೆದಾರರಿಗೆ ಪಟ್ಟಣ ಪಂಚಾಯತಿ ತುರುವೇಕೆರೆ ಇವರ ವತಿಯಿಂದ ಕಾರ್ಯಾದೇಶವನ್ನು ನೀಡಿದ್ದು, ಗುತ್ತಿಗೆ ಕರಾರಿರನ್ವಯ ಜೂನ್ 2012 ಕ್ಕೆ ಕಾಮಗಾರಿಯು ಮುಕ್ತಾಯಗೊಳ್ಳಬೇಕಾಗಿದ್ದು, ದಿನಾಂಕ 2.09.2011 ಹಾಗೂ ದಿನಾಂಕ 17.10.2011 ರಂದು ಗುತ್ತಿಗೆದಾರರಿಗೆ ನೋಟೀಸ್ ಜಾರಿ ಮಾಡಿ ಕಾಮಗಾರಿಯ ಪ್ರಗತಿಯನ್ನು ತ್ವರಿತಗೊಳಿಸಲು ಸೂಚಿಸಲಾಗಿದೆ. ಪ್ರಸ್ತುತ ವಾಣಿಜ್ಯ ಸಂಕೀರ್ಣ ನೆಲ ಮಟ್ಟದ ತಾರಸೀವರೆಗೆ ಕಾಮಗಾರಿ ಪೂರ್ಣಗೊಂಡಿರುತ್ತದೆ.

ಮತ್ಸ್ಯಾಶ್ರಯ ಯೋಜನೆಯಡಿ ಘಟಕ ವೆಚ್ಚ ಹೆಚ್ಚಿಸುವುದು

294(343) ಶ್ರೀ ಮಂಜುನಾಥ್ ಹೆಚ್.ಪಿ.(ಹುಣಸೂರು) ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಸರ್ಕಾರದ ವತಿಯಿಂದ ವಿವಿಧ ಆಶ್ರಯ ಯೋಜನೆಗಳಲ್ಲಿ ಕನಿಷ್ಟ ಘಟಕ ವೆಚ್ಚ 60 ಸಾವಿರ ರೂಗಳನ್ನು ನಿಗದಿಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

(ಆ) ಬಂದಿದ್ದಲ್ಲಿ ಮೀನುಗಾರಿಕೆ ಇಲಾಖೆ ವತಿಯಿಂದ ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ ಘಟಕ ವೆಚ್ಚ 40 ಸಾವಿರ ರೂ. ನಿಗದಿ ಮಾಡಿರುವುದು ಅನ್ಯಾಯ ಮಾಡಿದಂತಲ್ಲವೇ;

(ಇ) ಮನೆ ನಿರ್ಮಾಣ ಸಾಮಗ್ರಿಗಳ ಬೆಲೆಯು ಬಹಳ ಹೆಚ್ಚಾಗಿದ್ದು ವಿಚಾರದ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಆನಂದ ವಸಂತ ಅಸ್ನೋಟಿಕರ (ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು)

(ಅ) ಹೌದು.

(ಆ),(ಇ) ಆದೇಶ ಸಂಖ್ಯೆ: ಪಸಂಮೀ/176/ಮೀಇಯೋ/2011, ದಿನಾಂಕ: 29-11-2011ರಲ್ಲಿ 2011-12ನೇ ಸಾಲಿನಿಂದ ಮತ್ಸ್ಯಾಶ್ರಯ ಯೋಜನೆಯಡಿ ಮಂಜೂರು ಮಾಡುವ ಮನೆಗಳ ಘಟಕ ವೆಚ್ಚವನ್ನು ರೂ. 60,000-00ಗಳಿಗೆ ಹೆಚ್ಚಿಸಲಾಗಿರುತ್ತದೆ.

K.S.H.D.P ಯೋಜನೆಯಡಿ ಕಾಮಗಾರಿಗಳು

296(225) ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು) ಮಾನ್ಯ ಲೋಕೋಪಯೋಗಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಕಿತ್ತೂರು ಮತಕ್ಷೇತ್ರದ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಕೈಗೆತ್ತಿಕೊಂಡ ಕಾಮಗಾರಿಗಳು ಯಾವುವು(ವಿವರ ನೀಡುವುದು)

(ಆ) ಕೈಗೆತ್ತಿಕೊಂಡ ಕಾಮಗಾರಿಗಳು ಯಾವ ಹಂತದಲ್ಲಿವೆ;

(ಇ) ಕೆ.ಎಸ್.ಹೆಚ್.ಡಿ.ಪಿ. ಕಾಮಗಾರಿಗಳಿಗೆ ಕಿತ್ತೂರು ಮತಕ್ಷೇತ್ರಕ್ಕೆ ಬಿಡುಗಡೆ ಮಾಡಿದ ಅನುದಾನವೆಷ್ಟು?

ಶ್ರೀ ಸಿ.ಎಂ. ಉದಾಸಿ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಕರ್ನಾಟಕ ರಾಜ್ಯ ಉದಾಸಿ ಅಭಿವೃದ್ಧಿ ಯೋಜನೆಯಡಿಯಲ್ಲಿ (**K.S.H.D.P**) ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸುವ ಯೋಜನೆಯು ಪರಿಶೀಲನೆಯಲ್ಲಿದೆ.